ಕೊಟ್ಟಿದ್ದೇನೆ, ಆದರೂ ಉತ್ತರ ಇಲ್ಲ. ಆದ್ದರಿಂದ ವಿರೋಧ ಪಕ್ಷಕ್ಕೆ ಇರುವ ಹಕ್ಕಿನಂತೆ ಜೀರೋ ಅವರನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಹೇಳಿದ ವಿಚಾರದಲ್ಲಿ ಒನೇ ತಾರೀಖು ವಿವರವಾದ ಉತ್ತರ ಕೊಡುತ್ತೇವೆ.

X ಹಿರಿಯೂರು ತಾಲ್ಲೂಕು ವಿ.ವಿ. ಪುರದ ಸರ್ಕಾರಿ ಪ್ರೌಢಶಾಲೆಯನ್ನು ವಾಣಿ ವಿಲಾಸ ಕೋ ಆಪರೇಟೀವ್ ಸಕ್ಕರೆ ಕಾರ್ಖಾನೆ ಆವರಣಕ್ಕೆ ಸ್ಥಳಾಂತರಿಸಿರುವುದು.

ಶ್ರೀ ಆರ್, ರಾಮಯ್ಯ (ಹಿರಿಯೂರು).—ಮಾನ್ಯ ಅಧ್ಯಕ್ಷರೆ, ೧೯೬೧ನೇ ಇಸವಿಯಲ್ಲಿ ವಾಣಿ ವಿಲಾಸ ಡ್ಯಾಮ್ ಪಕ್ಕದ ವಿ. ವಿ. ಪುರಕ್ಕೆ ಒಂದು ಸರ್ಕಾರಿ ಪ್ರೌಢಶಾಲೆ ಮಂಜೂರಾಗಿತ್ತು. ಇದಕ್ಕೆ ಕಾರಣ ಅಂದರೆ ಅಲ್ಲಿಯ ಸುತ್ತಮುತ್ತಲಿನ ಆರ್ಥಿಕ ಹಿಂದುಳಿದಿರುವಿಕೆ, ಶೈಕ್ಷಣಿಕ ಹಿಂದುಳಿದಿರುವಿಕೆ ಅನುಸೂಚಿತ ಜಾತಿಯವರ ಹಿಂದುಳಿದಿರುವಿಕೆ, ಇವೆಲ್ಲಾ ಆಧಾರದ ಮೇಲೆ ಅಲ್ಲಿಗೆ ಒಂದು ಹೈಸ್ಕೂಲು ಮಂಜೂರಾಗಿತ್ತು. ಅಲ್ಲಿನ ಜನರು ಎಷ್ಟೊಂದು ವಿಶಿಷ್ಟವಾಗಿ ಅಭಿವೃದ್ಧಿ ಕಾರ್ಯ ಕೈಗೊಂಡರು ಅಂದರೆ ತಕ್ಷಣ ಸರ್ಕಾರದ ಗಮನ ಸೆಳೆದು ೫ ಎಕರೆ ಜಮೀನನ್ನು ಮಂಜೂರು ಮಾಡಿಸಿಕೊಂಡು, ಕಟ್ಟಡದ ಕೆಲಸ, ಕುಡಿಯುವ ನೀರಿನ ಕೆಲಸ ಎಲ್ಲಾ ಸೌಕರ್ಯಗಳನ್ನು ಮಾಡಿಕೊರಡಿದ್ದಂತಹ ಸಂದರ್ಭದಲ್ಲಿ ಮೊನ್ನೆ ಡಿಸೆಂಬರ್ ತಿಂಗಳಲ್ಲಿ ಪಾರ್ಲಿಮೆಂಟ್ ಚುನಾವಣೆ ನಡೆದಂಥ ಸಂದರ್ಭದಲ್ಲಿ ಇದ್ದಕ್ಕಿದ್ದ ಹಾಗೆ ಆ ಒಂದು ಹೈಸ್ಕೂಲು ಶಾಲೆಯಲ್ಲಿ ವಿ. ಪಿ. ಪುರದಿಂದ, ವಾಣಿವಿಲಾಸ್ ಕೋ–ಆಪರೇಟೀವ್ ಶುಗರ್ ಫ್ಯಾಕ್ಟರಿ ಆವರಣಕ್ಕೆ ಸ್ಥಳಾಂತರಿಸಲಿಕ್ಕೆ ಪ್ರಯತ್ನ ಆಗಿರುವುದು ಕಂಡು ಬಂದಿದೆ. ಈ ವಿಚಾರ ಕಾರ್ಮಿಕ ಮಂತ್ರಿಗಳ ಹಾಗೂ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿದೆ. ಈಗ ಅಲ್ಲಿ ಶುಗರ್ ಫ್ಯಾಕ್ಟರಿ ಲೇ ಆಫ್ ಆಗಿದೆ. ವೈಯಕ್ತಿಕವಾಗಿ ಹೇಳುವುದಾದರೆ, ಅಲ್ಲಿ ಒಂದು ಖಾಸಗಿ ಪ್ರೌಢಶಾಲೆ ನಡೆಯುತ್ತಿದೆ. ಆದರ ಹಿನ್ನೆಲೆಯನ್ನು ಇಟ್ಟುಕೊಂಡು ಸ್ಥಳಾಂತರ ಮಾಡುತ್ತಿದ್ದಾರೆಂದು ಕಾಣಿಸುತ್ತಿದೆ. ಯಾರದೋ ಚಮತ್ಕಾರಕ್ಕೋಸ್ಕರ ಅದು ಆಗುವಂಥಾದ್ದು ಆಗಬಾರದು ಈಗಾಗಲೆ ಸರತಕ್ಕ ಹೈಸ್ಕೂಲು ಅಲ್ಲಿಯೇ ಉಳಿಯಬೇಕೆಂದು ಸಂಬಂಧಪಟ್ಟ ಮಂತ್ರಿಗಳಲ್ಲಿ ವಿನಂತಿಸಿ ಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ (ಮಾನ್ಯ ಶಿಕ್ಷಣ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂಥ ವಿಷಯ ಗೊತ್ತಿದೆ. ಒಂದು ಶಾಲೆ ಮೊದಲಿನಿಂದ ಅಲ್ಲಿ ಇತ್ತು, ಇನ್ನೊಂದು ಸರ್ಕಾರಿ ಶಾಲೆ ಬಂದಿದೆ. ಆದು ಏನೇ ಇರಲಿ, ವಿದ್ಯಾ ಇಲಾಖೆಯ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಅಲ್ಲಿ ಎರಡು ಶಾಲೆಗಳ ಅಗತ್ಯ ಇದೆಯೇ ಎಂಬುದರ ಬಗ್ಗೆ ನಾನು ನೋಡಿ ಇ ಶಾಲೆ ಅಲ್ಲಿಯೇ ಉಳಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ. ನಾನು ತರಿಸತಕ್ಕ ವರದಿಯನ್ನು ಮಾನ್ಯ ಸದಸ್ಯರಿಗೆ ಕಳುಹಿಸಿ ಕೊಡುತ್ತೇನೆ. ನಿಷ್ಪಕ್ಷಪಾತವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ಈ ವಿಚಾರ ಸುಮಾರು ಎಂಟತ್ತು ಸಾರಿ ನನ್ನ ಹತ್ತಿರಕ್ಕೂ ಬಂದಿರಬೇಕು. ಈಗ ವಾಣಿವಿಲಾಸ್ ಇದರಲ್ಲಿ ಪ್ರೈವೇಟ್ ಹೈಸ್ಕೂಲು ಒಂದು ಇದೆ, ಗವರ್ನ್‌ಮೆಂಟ್ ಹೈಸ್ಕೂಲು ಒಂದು ಇದೆ, ಗವರ್ನ್‌ಮೆಂಟ್ ಹೈಸ್ಕೂಲು ಒಂದು ಇದೆ. ಮಾನ್ಯ ಮಂತ್ರಿಗಳು ಅಲ್ಲಿ ಎರಡು ಹೈಸ್ಕೂಲು ಇರಲಿಕ್ಕೆ ಸಾಧ್ಯವೇ ಪರಿಶೀಲನೆ ಮಾಡುತ್ತೇವೆಂದು ಹೇಳಿದರು ಅದನ್ನು ನಾನು ಒಪ್ಪುತ್ತೇನೆ, ಈಗ ಅಲ್ಲಿ ರಾಜಕೀಯ ದೃಷ್ಟಿಯಿಂದ ಪ್ರಾರಂಭವಾಗುತ್ತಿದೆ ಎನ್ನುವುದು ಕಂಡುಬರುತ್ತಿದೆ. ಏನಾದರೂ ಮಕ್ಕಳಿಗೆ ತೊಂದರೆಯಾಗದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ. ಈಗ ಅಲ್ಲಿ ಎರಡು ಹೈಸ್ಕೂಲಗಳು ನಡೆಯಲಿಕ್ಕೆ ಅವಕಾಶ ಇದೆ ಎಂದು ಕೇಳಿದ್ದೇನೆ. ಈಗ ಏನಾದರೂ ಶಿಫ್ಟ್ ಮಾಡಿದರೆ ನಮ್ಮ ತಲೆಯ ಮೇಲೆ ನಾವೇ ಆಪಾದನೆ ಒಪ್ಪಿಕೊಂಡ ಹಾಗೆ ಆಗುತ್ತದೆ. ರಾಜಕೀಯದ ಒತ್ತಡದಿಂದ ಆಗಿರತಕ್ಕ ಆರ್ಡರ್ ಎಂದು ತಿಳಿದು ಬಂದಿದೆ. ಈಗ ಅಲ್ಲಿ ಎರಡು ಹೈಸ್ಕೂಲುಗಳನ್ನು ಮುಂದುವರಿಸಿ, ಮಕ್ಕಳಿಗೆ ತೊಂದರೆಯಾಗುವುದು ಬೇಡ.

ಶ್ರೀ ಎಂ, ರಘುಪತಿ.—ನಾನು ತೆರೆದ ಮನಸ್ಸಿನಿಂದ ಕೆಲಸ ಮಾಡುತ್ತೇನೆ. ನಾನೇ ಖುದ್ದಾಗಿ ಆ ಸ್ಥಳಕ್ಕೆ ಹೋಗಿ ಬರುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಹೈಸ್ಕೂಲು ಸ್ಥಳಾಂತರ ಮಾಡಲಿಕ್ಕೆ ಆರ್ಡರ್ ಹೊರಡಿಸಿದ್ದಾರೆ ಎಂದು ತಿಳಿದು ಬಂದಿದೆ. ಆದರ ಬಗ್ಗೆ ಅಂತಿಮವಾಗಿ ತೀರ್ಮಾನವಾಗುವವರೆಗೂ ಯಾವುದೇ ಕ್ರಮ ತೆಗೆದುಕೊಳ್ಳದಂತೆ ನೋಡಿಕೊಳ್ಳಬೇಕು.

ಶ್ರೀ ಎಂ. ರಘುಪತಿ.—ಅದು ಕೋರ್ಟ್‌ನಲ್ಲಿದೆ ಎಂದು ತಿಳಿದುಬಂದಿದೆ. ಯಾವುದಕ್ಕೂ ಖುದ್ದಾಗಿ ನಾನೇ ಹೋಗಿ ಬರುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅದನ್ನು ತಕ್ಷಣ ಮಾಡಿ.

ಶ್ರೀ ಎಂ. ರಘುಪತಿ.—ಒಳ್ಳೆಯದನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ಈ ವಿಚಾರ ಮಾನ್ಯ ಮುಖ್ಯಮಂತ್ರಿ ಮಂತ್ರಿಗಳಿಗೆ ಸಂಬಂಧ ಪಟ್ಟಿದೆ,

ಶ್ರೀ ಎ. ಲಕ್ಷ್ಮೀಸಾಗರ್,—ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಬೇಕು ಎನ್ನುವುದನ್ನು ಕಳುಹಿಸಿಕೊಟ್ಟಿದ್ದಾರೆ. ಆದ್ದರಿಂದ, ನಾನು ಮಾನ್ಯ ಸದಸ್ಯರಿಗೆ ಉತ್ತರ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ನಾನು ಕೇಳುವುದಕ್ಕೆ ಸರಿಯಾದ ಉತ್ತರ ಸಿಕ್ಕದೇ ಇದ್ದರೆ ಕಷ್ಟವಾಗಂತ್ತದೆ,

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರು ಮುಖ್ಯ ಮಂತ್ರಿಗಳು ಇದ್ದಾಗ ಇದರ ಬಗ್ಗೆ ಪ್ರಸ್ತಾಪ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ಹಾಗೆ ಆಗಬಹುದು.

XI ಹೊಸನಗರ, ಚಕ್ರ, ಸಾವೆಹಕ್ಕಲು ಮತ್ತು ವರಾಹಿ ಜಲವಿದ್ಯುತ್ ಯೋಜನೆಗಳಲ್ಲಿ ಮುಳುಗಡೆಯಾಗುವ ಪ್ರದೇಶದ ಜನರಿಗೆ ನೌಕರಿ ಕೊಡುವುದು,

ಶ್ರೀ ಬಿ. ಧರ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸರ್ಕಾರದವರು ಹೊಸನಗರ ಚಕ್ರ ಸಾವೆಹಕ್ಕಲು ಮತ್ತು ವರಾಹಿ ಜಲವಿದ್ಯುತ್ ಯೋಜನೆಗಳಲ್ಲಿ ಮುಳುಗಡೆಯಾಗುವ ಪ್ರದೇಶದ ಜನರಿಗೆ ಈ ಯೋಜನೆಗಳಲ್ಲಿಯೇ ಮನೆಗೆ ಒಬ್ಬರಂತೆ ನೌಕರಿ ಕೊಡುತ್ತೇವೆಂದು ಒಂದು ಸರಕಾರಿ ಪರಿ ಪತ್ರವನ್ನು ಸಹಾ ಹೊರಡಿಸಿರುತ್ತಾರೆ. ಆದರೆ ಅಲ್ಲಿಯೇ ಸಾಕಷ್ಟು ವಿದ್ಯಾವಂತರಿದ್ದಾಗ್ಯೂ ಶಿವಮೊಗ್ಗ ಉದ್ಯೋಗ ವಿನಿಮಯ ಕೇಂದ್ರದಿಂದ ಅಲ್ಲಿ ರಿಜಿಸ್ಟರ್ ಮಾಡಿಸಿದಂಥವರ ಹೆಸರುಗಳನ್ನು ಕಳುಹಿಸದೆ ಪರ ಊರಿನವರನ್ನು ಅಲ್ಲಿರುವ ಮೇಲಧಿಕಾರಿಗಳ ಸಂಬಂಧೀಕರುಗಳನ್ನು ಕರೆದುಕೊಂಡು ಭರ್ತಿ ಮಾಡಿರುತ್ತಾರೆ. ಒಂದು ವೇಳೆ ಅಪ್ಪಿ ತಪ್ಪಿ ಸಂದರ್ಶನ ಬಂದರೆ ಸ್ಥಳೀಯರನ್ನು ನೇಮಕ ಮಾಡಿಕೊಳ್ಳದೇ ಅಧಿಕಾರಿಗಳು ಬಹಳ ವಿಚಕ್ಷಣೆಯಿಂದ ತಮ್ಮ ಕಡೆಯವರನ್ನೇ ನೇಮಕ ಮಾಡಿಕೊಳ್ಳುವುದರಲ್ಲಿ ಯಶಸ್ವಿಯಾಗಿರುತ್ತಾರೆ. ಸ್ಥಳೀಯರು ಜಮೀನು ಮನೆ ಕಳೆದುಕೊಂಡಿದ್ದು ಅಲ್ಲದೆ, ವಿದ್ಯಾವಂತ ಮಕ್ಕಳಿಗೂ ಕೆಲಸ ಕೊಡಿಸಲಾರದೆ ವಂಚಿತರಾಗಿರುವ ವಿಷಯವನ್ನು ಮಾನ್ಯ ಸಭಾಧ್ಯಕ್ಷರ ಮೂಲಕ ಸಂಬಂಧ ಪಟ್ಟವರು ಗಮನವನ್ನು ಸೆಳೆಯಲು ಬಯಸುತ್ತೇನೆ.

ಶ್ರೀ ಜೆ. ಎಸ್. ದೇಶ್‌ಮುಖ್ (ಮಾನ್ಯ ವಿದ್ಯುತ್, ಗಣಿ ಮತ್ತು ಭೂಗರ್ಭ ವಿಜ್ಞಾನ ಖಾತೆಯ ಮಂತ್ರಿಗಳು).—ಅಧ್ಯಕ್ಷರೆ, ಆದರ ಬಗ್ಗೆ ನಾನು ಪೂರ್ಣ ಮಾಹಿತಿಯನ್ನು ತರಿಸಿ ಹೇಳುತ್ತೇನೆ.

ಶ್ರೀ ಬಿ ಧರ್ಮಪ್ಪ.—ಮಾನ್ಯ ಅಧ್ಯಕ್ಷರೆ, ಅಲ್ಲಿ ಮನೆ ಮತ್ತು ಜಮೀನು ಎರಡು ಕಳೆದುಕೊಂಡು ವರು ಇದ್ದಾರೆ. ಆದ್ದರಿಂದ, ಇದರ ಬಗ್ಗೆ ಆರ್ಜೆಂಟಾಗಿ ನೋಡಬೇಕಾಗುತ್ತದೆ.

ಶ್ರೀ ಜೆ. ಎಸ್, ದೇಶ್‌ಮುಖ್.—ಅಧ್ಯಕ್ಷರೆ, ಆದರ ಬಗ್ಗೆ ನಾನು ಆರ್ಜೆಂಟಾಗಿ ತರಿಸಿ ನೋಡುತ್ತೇನೆ.